# ಉಪತಹಶೀಲ್ದಾರವರ ಕಾರ್ಯಾಲಯ , ಹಂಪಸಾಗರ

ಉಪಸ್ಥಿತರು :- ಶ್ರೀ **ಶಿವಶಂಕರ್**
ಉಪತಹಶೀಲ್ದಾರರು , ನಾಡ ಕಾರ್ಯಾಲಯ ,
ಹಂಪಸಾಗರ

| ವಾದಿ :- | ಪ್ರತಿವಾದಿ :- |
|---|---|
| ವೀರಭದ್ರಪ್ಪ ಮಡಿವಾಳ<br>ತಂದೆ ನಿಂಗಪ್ಪ<br>ಸಕ್ರಹಳ್ಳಿ,<br>ಹಗರಿಬೊಮ್ಮನಹಳ್ಳಿ ತಾಲೂಕು | ಎಂ ಗೋಣೆಮ್ಮ<br>ಗಂಡ ಲೇಟ್ ಹುಲುಗಪ್ಪ,<br>ರಾಮನಗರ<br>ಹಬೊಹಳ್ಳಿ |

**ವಿಷಯ :-** ಹಗರಿಬೊಮ್ಮನಹಳ್ಳಿ ತಾಲೂಕು **ಹಂಪಸಾಗರ** ಹೋಬಳಿ **ಅಡವಿಕ್ಯಾದಿಗಿಹಳ್ಳಿ** ಗ್ರಾಮದ ಸ ನಂ **241/ಬಿ** ವಿಸ್ತೀರ್ಣ **7.00** ಎಕರೆ ಜಮೀನು ನೊಂದಾಯಿತ ಕ್ರಯಪತ್ರದ ಪ್ರಕಾರ ಹಕ್ಕುಬದಲಾವಣೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ತಕರಾರು ವಿಚಾರಣೆ

*****

**ಪೀಠಿಕೆ** :-

ಹಗರಿಬೊಮ್ಮನಹಳ್ಳಿ ತಾಲೂಕು **ಹಂಪಸಾಗರ** ಹೋಬಳಿ **ಅಡವಿಕ್ಯಾದಿಗಿಹಳ್ಳಿ** ಗ್ರಾಮದ ಸ ನಂ **241/ಬಿ** ವಿಸ್ತೀರ್ಣ **7.00** ಎಕರೆ ಜಮೀನಿನ ಹಕ್ಕುಬದಲಾವಣೆಗೆ ಸಂಬಂಧಿಸಿದಂತೆ ಉಪನೊಂದಣಾಧಿಕಾರಿಗಳ ಕಾರ್ಯಾಲಯದಲ್ಲಿ ಡಾಕುಮೆಂಟ್ ನಂಬರ್ 540/2016-17 ದಿನಾಂಕ: 17.05.2016ರ ಪ್ರಕಾರ ನೊಂದಾಯಿತವಾದ ದಸ್ತಾವೇಜು ತಾಲೂಕು ಕಛೇರಿ ಭೂಮಿಕೇಂದ್ರದಲ್ಲಿ ದಿನಾಂಕ: 19.05.2016ರಂದು ಸ್ವೀಕೃತಗೊಂಡು ನಮೂನೆ-21 ನೋಟೀಸ್ ತಯಾರಿಸಿ ಹಕ್ಕುಬದಲಾವಣೆ ಪ್ರಕ್ರಿಯೆ ಜರುಗಿಸಲು ಕಂದಾಯ ನಿರೀಕ್ಷಕರು, ಹಂಪಸಾಗರ ಇವರಿಗೆ ಕಳುಹಿಸಿಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟೀಸನ್ನು ಪ್ರಚುರಪಡಿಸಲಾಗಿ ನಿಗಧಿತ ಅವಧಿಯೊಳಗಾಗಿ ಆಸಕ್ತಿ ಉಳ್ಳವರಿಂದ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಇದೊಂದು ವಿವಾದಾಸ್ಪದ ಪ್ರಕರಣವೆಮದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ವಹಿಯಲ್ಲಿ ನಮೂದಿಸಿಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67 ರಂತೆ ವಿಚಾರಣೆಗೆ ದಿನಾಂಕ ನಿಗಧಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ಜಾರಿಮಾಡಿ ವಿಚಾರಣೆ ಮಾಡಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲಾಯಿತು. ಸದರಿ ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ವಿಚಾರಣೆ ಸಮಯದಲ್ಲಿ ಪ್ರತಿವಾದಿಯು ಮೂಲ ಪಟ್ಟಾದಾರಳು ನನ್ನ ಸಹೋದರನ ಹೆಂಡತಿಯಾಗಬೇಕಾಗಿದ್ದು, ಸದರಿ ಜಮೀನಿನಲ್ಲಿ ನಮಗೂ ಭಾಗ ಇರುವುದಾಗಿ ತಿಳಿಸಿರುತ್ತಾರೆ. ಆದರೆ ಯಾವುದೇ ಪೂರಕ ದಾಖಲೆ ಸಲ್ಲಿಸಿರುವುದಿಲ್ಲ. ವಾದಿಗಳು ವಿಚಾರಣೆ ಸಮಯದಲ್ಲಿ ಸದರಿ ಜಮೀನನ್ನು ರೇಣುಕಮ್ಮ ಗಂಡ ಎ ನಂಜುಂಡಪ್ಪ ಇವರಿಂದ ಡಾಕುಮೆಂಟ್ ನಂ 540/2016-17 ದಿನಾಂಕ: 17.05.2016ರ ಪ್ರಕಾರ ಕ್ರಯಕ್ಕೆ ಪಡೆದಿರುತ್ತೇನೆ. ಕಾರಣ ನೊಂದಾಯಿತ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆ ಮಾಡಲು ಕೋರಿರುತ್ತಾರೆ.

ಪುಟ 2ಕ್ಕೆ . . .

ವಿವಾದಾಸ್ಪದ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಗಿ ಪ್ರತಿವಾದಿಗಳು ವಿಚಾರಣೆ ಸಮಯದಲ್ಲಿ ತಮ್ಮ ತಕರಾರನ್ನು ಪುಷ್ಠೀಕರಿಸುವಲ್ಲಿ ಯಾವುದೇ ಪೂರಕವಾದ ದಾಖಲೆಗಳನ್ನು ಸಲ್ಲಿಸುವುದರಲ್ಲಿ ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಹಾಗೂ ಭಾರತೀಯ ನೊಂದಾವಣೆ ಅಧಿನಿಯಮ ಕಾಯ್ದೆ 1908 ಕಲಂ 17ರ ಪ್ರಕಾರ ಯಾವುದೇ ನೊಂದಾಯಿತ ದಸ್ತಾವೇಜನ್ನು ಗೈರು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಈ ಕಾರ್ಯಾಲಯ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಪ್ರತಿವಾದಿಗಳ ತಕರಾರು ಅರ್ಜಿಯನ್ನು ತಳ್ಳಿಹಾಕಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 128 ಮತ್ತು 129ರ ಪ್ರಕಾರ ಕ್ರಮಕೈಗೊಳ್ಳುವ ಅವಶ್ಯಕತೆ ಇರುವ ಕಾರಣ ಈ ಕೆಳಗಿನಂತೆ

ನಂ/ಕಂ/ಪಹಣಿ/ವಿವಾದ/15/15-16 ದಿನಾಂಕ :25.08.2016

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ **ಅಡವಿಕ್ಯಾದಿಗಿಹಳ್ಳಿ** ಗ್ರಾಮದ ಸ ನಂ **241/ಬಿ** ವಿಸ್ತೀರ್ಣ **7.00** ಎಕರೆ ಜಮೀನನ್ನು ಡಾಕುಮೆಂಟ್ ನಂ **540/2016-17** ದಿನಾಂಕ: **17.05.2016**ರ ಪ್ರಕಾರ **ವಿಕ್ರಯದಾರರ ಹೆಸರನ್ನು ಕಡಿಮೆ ಮಾಡಿ** ಕ್ರಯದಾರರಾದ ಶ್ರೀ **ವೀರಭದ್ರಪ್ಪ ಮಡಿವಾಳ ತಂದೆ ನಿಂಗಪ್ಪ** ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ ಓದಿ ತಪ್ಪುಗಳನ್ನು ತಿದ್ದಿ, ದಿನಾಂಕ : 25/08/16 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು,
ನಾಡ ಕಛೇರಿ,
ಹಂಪಸಾಗರ.

ಇವರಿಗೆ

1) ವಾದಿ ಮತ್ತು ಪ್ರತಿವಾದಿಗಳಿಗೆ ಮಾಹಿತಿಗಾಗಿ
2) ಶಿರಸ್ತೇದಾರರು ಭೂಮಿ ಕೇಂದ್ರ, ತಾಲೂಕು ಕಛೇರಿ, ಹಬೊಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
3) ಕಂದಾಯ ಪರಿವೀಕ್ಷಕರು, ಹಂಪಸಾಗರ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ
4) ಹೆಚ್ಚಿನ ಪ್ರತಿ ಕಡತಕ್ಕೆ

22/10/16